"ಅಂತಾದ್ದೇನಾಯ್ತು ಮಾರಾಯಾ? ಸಂಸಾರ ಗುಟ್ಟು, ವ್ಯಾಧಿ ರಟ್ಟು ಅಂತಾರೆ. ನಿನ್ನ ನೋಡಿದ್ರೆ ತಿರುಗಾಮುರುಗಾ..."

ಶ್ರೀನಿವಾಸರಾಯರು ದೊಡ್ಡ ಪುರಾಣವನ್ನೇ ಬಿಚ್ಚಿದರು. 'ಇಂತಾದ್ದು ಹೇಳಬೇಕು, ಇಂತಾದ್ದು ಮುಚ್ಚಿಡಬೇಕು ಎನ್ನುವ ಯಾವ ಅಡ್ಡಗೆರೆಯನ್ನೂ ಹಾಕಿಕೊಳ್ಳದೆ ಎಲ್ಲವನ್ನೂ ಗೆಳೆಯನೆದುರು ವರದಿ ಒಪ್ಪಿಸಲೆಂದೇ ಅವರು ವೆಂಕಪ್ಪಯ್ಯನನ್ನು ಹುಡುಕಿಕೊಂಡು ಬಂದಂತಿತ್ತು. ವೆಂಕಪ್ಪಯ್ಯ ಅಂದುಕೊಂಡಿದ್ದಂತೆ ಅವರು ದುಡಿದು ಗುಡ್ಡೆ ಹಾಕಿರುವುದೂ ನಿಜ, ಕೈತುಂಬಾ ಪಿಂಚಣಿ ತೆಗೆದುಕೊಳ್ಳುತ್ತಿರುವುದೂ ನಿಜ. ಆದರೆ, ಮನೆಯಲ್ಲಿ ಅವರಿಗೆ ಮೂರುಕಾಸಿನ ಮರ್ಯಾದೆ ಇಲ್ಲ ಎಂದು ಅವರ ಕನವರಿಕೆ. ಹೊತ್ತಿಗೆ ಸರಿಯಾಗಿ ಒಂದು ಲೋಟ ಬಿಸಿ ಕಾಫಿ ಕೊಡುವವರಿಲ್ಲ. ಹೊಟ್ಟೆ ತುಂಬಾ ಊಟ ಹಾಕುವುದಿಲ್ಲ. ಹೋಟೆಲಿಗೆ ಹೋಗಿ ತಿಂದು ಬರುವುದು ಕಷ್ಟವೇನಲ್ಲ. ದುಡ್ಡು ತಂದಿಟ್ಟದ್ದನ್ನೆಲ್ಲಾ ಹೆಂಡತಿ ಮುಚ್ಚಿಟ್ಟುಕೊಳ್ಳುತ್ತಾಳೆ. 'ದುಡ್ಡು ತೆಗೆದುಕೊಂಡು ಹೊರಗೆ ಹೋದರೆ ಪಂಗನಾಮ ಹಾಕಿಸಿಕೊಂಡು ಬರುವುದು ಗ್ಯಾರಂಟಿ' ಎಂದು ಅವಳ ನಂಬಿಕೆ. 'ನನ್ನ ದುಡ್ಡು, ನನ್ನ ಮರ್ಜಿ' ಅಂದರೆ ಮನೆಯವರೆಲ್ಲಾ ತಿರುಗಿ ಬೀಳುತ್ತಾರೆ. 'ಬೀದೀಲಿ ಚೆಲ್ಲಿ ಬರೋದಕ್ಕಾ ನೀವು ದುಡಿದಿದ್ದು? ದುಡ್ಡು ಕೊಡ್ತೀನಿ ಅಂದ್ರೆ ಯಾರು ಬೇಕಾದ್ರೂ ನಾಲಿಗೆಗೆ ಬೆಲ್ಲ ಸವರಿಕೊಂಡು ಮಾತಾಡ್ತಾರೆ' ಅನ್ನುತ್ತಾನೆ ಮಗ. 'ಅವರೆಲ್ಲಾ ಒಂದು, ನಾನೊಬ್ಬೇ ಒಂದು ಅಂತ ಯಾವಾಗಿನಿಂದ್ಲೋ ಅನಿಸಿಬಿಟ್ಟಿದೆ...' ಉದ್ದದ ಉಸಿರು ಬಿಟ್ಟರು ರಾಯರು.

"ನಿಂಗೂ ಹಾಗೇ ಅನ್ಸುತ್ತಾ ಮಾರಾಯಾ?" ಎನ್ನುವ ಮಾತನ್ನು ಕಷ್ಟಪಟ್ಟು ತಡೆದುಕೊಂಡರು ವೆಂಕಪ್ಪಯ್ಯ. ಹೆಂಡತಿ ಎಲ್ಲಾ ಮಾತು ಕೇಳಿಸಿಕೊಳ್ಳುತ್ತಾ ಅಲ್ಲೇ ಗೋಡೆಗೊರಗಿ ನಿಂತಿದ್ದಾಳೆ. ಮಗ ಕಿವಿ ಈ ಕಡೆಯೇ ಇಟ್ಟುಕೊಂಡು ಒಳಗೆ, ಹೊರಗೆ ಓಡಾಡುತ್ತಿದ್ದಾನೆ. ಬಾಯಿಬಿಟ್ಟರೆ ಬಂದವನ ಎದುರೇ ಹೆಂಡತಿ, ಮಗ ಮುಖಕ್ಕೆ ಮಂಗಳಾರತಿ ಮಾಡಿದರೆ ಆಶ್ಚರ್ಯವಿಲ್ಲ. "ಥೋ..." ಎನ್ನುತ್ತಾ ತಲೆ ಆಡಿಸಿದರು ವೆಂಕಪ್ಪಯ್ಯ. "ಎಲ್ಲಾ ಇದ್ದೂ ಎಂತಾ ಕರ್ಮ ಮಾರಾಯಾ ನಿಂದು" ಅನುತಾಪ ತೋರಿಸಿದರು.

"ಮನೆ ರಿಪೇರಿ ಮಾಡ್ಬೇಕಂತೆ. ಕೂಡಿಟ್ಟಿದ್ದರಲ್ಲಿ ಒಂದಿಷ್ಟು ದುಡ್ಡು ಬಿಚ್ಚಿ ಅಂತ ಮಗನ ಗಲಾಟೆ. ಕೈಲಿ ದುಡ್ಡಿದ್ದಾಗ್ಲೇ ಬೆಲೆ ಕೊಡ್ತಿದ್ದೋರು ಖಾಲಿ ಕೈ ಮಾಡ್ಕೊಂಡ್ರೆ ನನ್ನ ಮೂಸಿ ನೋಡ್ತಾರಾ? 'ನಿಮಗೆಂತಾ ಖರ್ಚು, ಕೈತುಂಬಾ ಪೆನ್ಷನ್ ಬರಲ್ವಾ' ಅನ್ನುತ್ತಾಳೆ ಹೆಂಡತಿ. ಎಲ್ಲಾ ಸೇರ್ಕಂಡು ಏನೋ ಗೋಲ್ ಮಾಲ್ ಮಾಡ್ತಿದಾರೆ ಅಂತ ನಂಗೆ ಅನುಮಾನ..."

'ಅವರೆಲ್ಲಾ ಒಂದು, ನಾನೊಬ್ಬೇ ಒಂದು ಅಂತ ಯಾವಾಗಿನಿಂದ್ಲೋ ಅನಿಸಿಬಿಟ್ಟಿದೆ... ಉದ್ದದ ಉಸಿರು ಬಿಟ್ಟರು ರಾಯರು.

